ರವಿ ಎಂ. ಪೈ, ಹೊನ್ನಾವರ

ಮತ ಹಾಕಲು 18 ವರ್ಷ ಸಾಕು; ಆದರೆ ಮದುವೆ ಆಗಲು 21 ವರ್ಷ ಆಗಬೇಕು. ಏಕೆ?



ಏಕೆಂದರೆ ಮತ ಹಾಕಲು ಮೆಜಾರಿಟಿ ಸಾಕು; ಮದುವೆ ಆಗಲು ಮೆಚ್ಯುರಿಟಿ ಬೇಕು.

ಪಿ. ಚಿದಾನಂದ, ಜವನಗೊಂಡನಹಳ್ಳಿ

ಇಲ್ಲೊಬ್ಬ ಸಂಸಾರದಲ್ಲಿ ಸಾರವೇ ಇಲ್ಲ ಎನ್ನುತ್ತಿದ್ದಾನಲ್ಲ...?

ತಿಳಿಯಿತು; ಗೃಹದಲ್ಲಿ ಎಲ್ಲ ಮೇಡಮ್ಮವೇ ಆಗಿರುವುದರಿಂದ ಸಾರ್ ಅವೇನೂ ಇಲ್ಲ.

ವಿ. ಹೇಮಂತಕುಮಾರ್, ಬೆಂಗಳೂರು

ಚಳಿಗಾಲದಲ್ಲಿ ಹೆಂಡತಿಯನ್ನು ತವರುಮನೆಗೆ ಕಳುಹಿಸಬಾರದಂತೆ. ಏಕೆ?

ರೂಮ್ ಬೆಚ್ಚಗಿರಬೇಕಾದರೆ ಅವಳ ನೋಟದ ಶಾಖ, ಮಾತಿನ ಬಿರುಸು ಬೇಕಾಗುವುದರಿಂದ.

ಸುಂದರ್, ಬೆಂಗಳೂರು

ಸೋಷಿಯಲ್ ಮೀಡಿಯಾನೇ ಲೈಫೋ ಅಥವಾ ಲೈಫೇ ಸೋಷಿಯಲ್ ಮೀಡಿಯಾನೋ?



ಲೈಕೇ ಸ್ವರ್ಗ ಬ್ಲಾಕೇ ನರಕ ಬೇರೇನಿಲ್ಲ ಸುಳ್ಳು; ಪೋಸ್ಟು ಕಾಮೆಂಟ್ ಎರಡರ ಮಧ್ಯೆ ಸೋಷ್ಯಲ್ ಮೀಡ್ಯಾ ಬಾಳು.

ಕೆ.ಎಂ. ವಿಭೂತಿ, ಹರಿಹರ

ಪ್ರಪಂಚದಲ್ಲೇ ಮೊದಲು ಸುಳ್ಳು ಹೇಳಿದ್ದು ದೇವನೋ, ಮನುಷ್ಯನೋ?

'ಸಮಾನವಾಗಿ ಅಮೃತ ಹಂಚಿಕೊಳ್ಳೋಣ' ಎಂದ ದೇವಸಭೆಯ ಸ್ಪೀಕರ್.

ದತ್ತು ಕುಲಕರ್ಣಿ, ದಾವಣಗೆರೆ

ಹೆದರದೆ ಆತ್ಮಹತ್ಯೆ ಮಾಡಿಕೊಳ್ಳುವವರನ್ನು ಹೇಡಿಗಳೆಂದು ಕರೆಯುವುದೇಕೆ?

ನಿಜಕ್ಕೂ ಭಯ ಹುಟ್ಟಿಸುವ ರೋಗ, ಔಷಧಿ, ಆಸ್ಪತ್ರೆ, ವೈದ್ಯಪಡೆ, ಸೈಡ್ ಎಫೆಕ್ಟ್‌ಗಳ ಕೈಗೆ ಸಿಗದೆ ಸಾಯುವುದು ಹೇಡಿತನವೇ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ನಾವು ಕೇಳದೆಯೇ ಸಿಗುವ ವರ ಯಾವುದು?

ಭೂಪಟದಲ್ಲಿ ಹೊನ್ನಾವರ, ಬಾಣಾವರ, ನಾಗಾವರ, ನೀಲಾವರ...

ಪಿ.ಎನ್. ಶ್ರೀವತ್ಸ, ಬೆಂಗಳೂರು

ನಡೆದಂತೆ ನುಡಿಯುವುದಕ್ಕೂ, ನುಡಿದಂತೆ ನಡೆಯುವುದಕ್ಕೂ ವ್ಯತ್ಯಾಸವಿದೆಯೆ?

ನಡೆದಂತೆ ನುಡಿಯುವುದು ಕಾಮೆಂಟರಿ; ನುಡಿದಂತೆ ನಡೆಯುವುದು ಡ್ರಿಲ್/ಮಾರ್ಚ್‌ಫಾಸ್ಟ್.

ನರಸಿಂಹ ಪೈ, ಕಾಸರಕೋಡ

ಸಾಲ ಮರುಪಾವತಿಯಲ್ಲಿ ಮಹಿಳೆಯರು ಮುಂದೆ, ಗಂಡಸರು ಹಿಂದೆ. ಏಕೆ?

ಮರುಪಾವತಿಯೆಂದೇನಲ್ಲ; ಎಲ್ಲದರಲ್ಲೂ ಹೆಣ್ಣೇ ಮುಂದೆ. ಗಂಡಿಗೆ ಹೆಣ್ಣನ್ನು ಫಾಲೋ ಮಾಡುವುದೇ ಖುಷಿಖುಷಿ.

ಬಿ. ಚಂದ್ರೇಗೌಡ, ಬೆಂಗಳೂರು

ಬಣ್ಣಿಸಲಾಗದ ಅನುಭವ ಯಾವುದು?

ದೀರ್ಘ ಪ್ರಯಾಣ; ಎದುರು ನಿಮ್ಮನ್ನೇ ದಿಟ್ಟಿಸುವ ಸುರಸುಂದರಿ. ಪಕ್ಕದಲ್ಲಿ ಫೈರ್ ಬ್ರ್ಯಾಂಡ್ ಪತ್ನಿ....

ಶ್ರೀನಿವಾಸ ಪದಕಿ, ಮುಂಬಯಿ

ವರನ ವರಮಾನ, ವಧುವಿನ ವಯಸ್ಸು ಕೇಳಬಾರದಂತೆ. ಯಾಕೆ ಗುರು?

ವರನ ಸಿಬಿಲ್ ರೇಟಿಂಗ್, ವಧುವಿನ ಡೇಟ್ ಆಫ್ ಬರ್ತ್ ನೆಟ್‌ನಲ್ಲೇ ಸಿಗುವುದರಿಂದ.

ಕೆ.ಎಂ. ಲಿಂಗರಾಜು, ನಂಜನಗೂಡು

ಸೋತವರು ಮತದಾರರ ವಿರುದ್ಧ ಸೇಡಿನ ರಾಜಕಾರಣ ಮಾಡುವುದು ಸರಿಯೆ?

ರಾಜಕಾರಣವಲ್ಲವೇ; ರಾಜ ಆಗದಿದ್ದಾಗ 'ಕಾ..ಕಾ' ಎನ್ನುವುದು, ರಣ ಮಾಡುವುದು ಸಹಜ.

ಜವಳಿ ಜಯ್ಯಣ್ಣ, ದಾವಣಗೆರೆ

ಸತ್ಯಕ್ಕೆ ಏಕೆ ಎರಡು ಮುಖಗಳಿಲ್ಲ ಅನುಭವಿಗಳೆ?

ಎರಡು ಮುಖವಿದ್ದರೆ ಎರಡು ನಾಲಿಗೆ ಇರುತ್ತೆ; ಎರಡು ನಾಲಿಗೆ ಇರುವೆಡೆ ಸತ್ಯ ಇರಲು ಸಾಧ್ಯವಿಲ್ಲ.

## ಬಹುಮಾನಿತ ಪ್ರಶ್ನೆ

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ

ನೆರೆ, ಬರಗಳಿಂದ ನಾವು ಪಾಠ ಕಲಿಯುವುದು ಯಾವಾಗ?

ಕೆರೆ, ಬನಗಳನ್ನು ಕಾಪಾಡುವ ಪ್ರಜ್ಞೆ ಮೂಡಿದಾಗ.

ವ. ಉಮೇಶ ಕಾರಂತ, ಮಂಗಳೂರು

ಕಚೇರಿಯ ಎಲ್ಲ ಕಾರ್ಯಗಳು ಕಂಪ್ಯೂಟರೀಕರಣಗೊಂಡರೆ ಪೆನ್ನಿನ ಕಂಪನಿಯವರ ಗತಿ?

ಪೆನ್ ಡ್ರೈವ್ ಮಾಡತೊಡಗುತ್ತಾರೆ ಬದಲಾಗುವ ಕಾಲಕ್ಕೆ ಹೊಂದಿಕೊಳ್ಳುವುದೇ ಜೀವನ.

ಎಂ.ಎಸ್. ಮಂಜುನಾಥ, ಚಿಕ್ಕಮಗಳೂರು

ರಾಜಕಾರಣಿಗಳು ಗೆದ್ದ ನಂತರ 'ಇದು ನನ್ನ ಗೆಲುವಲ್ಲ, ಪ್ರಜಾಪ್ರಭುತ್ವದ ಗೆಲುವು' ಎನ್ನುವುದೇಕೆ?

ಪ್ರ ಪ್ರಲೋಭನೆ; ಜಾ ಜಾತೀಯತೆಗಳ ಪ್ರಭುತ್ವದಿಂದಲೇ ಗೆದ್ದದ್ದೆಂಬ ಅಪ್ಪಟ ಸತ್ಯವದು.

ಮೋಹನರಾಜು ಎಸ್.ಎ. ಶಂಕರಘಟ್ಟ

ಬಾಹ್ಯ ಸೌಂದರ್ಯಕ್ಕೂ, ಆಂತರಿಕ ಸೌಂದರ್ಯಕ್ಕೂ ವ್ಯತ್ಯಾಸವೇನು?



ಇದು ಕಣಕ; ಅದು ಹೂರಣ.

ಬೂಕನಕೆರೆ ವಿಜೇಂದ್ರ, ಮೈಸೂರು

ಇತ್ತೀಚೆಗೆ ಅತ್ತೆಸೊಸೆಯರಿಗಿಂತ ಅಮ್ಮ–ಮಗಳ ಜಗಳವೇ ಜಾಸ್ತಿಯಂತಲ್ಲಾ.....?

ಅದು ಅಮ್ಮ ಮಗಳಿಗೆ ಮುಂದಿನ ದಿನಗಳಿಗೆ ಕೊಡುತ್ತಿರುವ ಟ್ರೈನಿಂಗ್ ಅಂತೆ.

ಕೆ.ಹೆಚ್. ರಾಮಕೃಷ್ಣಾರೆಡ್ಡಿ, ಬೆಂಗಳೂರು

ಕನ್ನಡಕ್ಕಾಗಿ ಹೆಣ್ಣುಮಕ್ಕಳು ವ್ರತ ಮಾಡಿದರೆ ಹೇಗಿರುತ್ತದೆ ಸ್ವಾಮಿ?

ಹೆಣ್ಣುಮಕ್ಕಳಲ್ಲ, ತಾಯಂದಿರು ಮಾಡಬೇಕು; ಮಮ್ಮಿಡ್ಯಾಡಿ ಸಂಸ್ಕೃತಿ ಹರಡಿರುವುದೇ ಮಮ್ಮಿಗಳಿಂದ.

■ ರಾಮ್